

6

# ಮಿಮಿಯ ಹೊಸ ಜೀವನ






ಆಗತಾನೇ ತನ್ನ ಹೊಸ ಕೋಣೆಯಲ್ಲಿ ಏಳುತ್ತಿದ್ದ ಮಿಮಿಯನ್ನು ಮಿಸೆಸ್ ಜಿರಾಫೆ ಪರದೆ ಸರಿಸುತ್ತಾ ಬೆಳಗಿನ ಶುಭಾಶಯ ಹೇಳಿದಾಗ ಕಿಟಕಿಯ ಮೂಲಕ ಸೂರ್ಯ ಇಣುಕಿದ.
ತನ್ನ ಕಣ್ಣುಗಳನ್ನು ಉಜ್ಜಿಕೊಳ್ಳುತ್ತಾ ಟಿಂಗು ಮತ್ತು ಕಿಕಿ ಅಥವಾ ಬನ್ನಿ ಮೋಂಟಿ ಹಾಗೂ ಬಂಟಿ ಹತ್ತಿರದ ಹಾಸಿಗೆಗಳಲ್ಲಿ ಯಾಕೆ ಕಾಣುತ್ತಿಲ್ಲ.. ನಾನೆಲ್ಲಿದ್ದೇನೆ ಎಂದು ಮಿಮಿ ಆಶ್ಚರ್ಯಪಡುತ್ತಿದ್ದಳು.
ಆಗ ಅವಳಿಗೆ ನೆನಪಾಯಿತು...ಅವಳು ತನ್ನ ಹೊಸ ಮನೆಯಲ್ಲಿ, ಹೊಸ ಕುಟುಂಬದ ಜೊತೆಗೆ ಇದ್ದಾಳೆ ಎಂದು.
ತನ್ನ ಸ್ನೇಹಿತರಿಲ್ಲದೇ ಹಾಗೂ ಹಿಂದಿನ ರಾತ್ರಿ ಅಪರಿಚಿತ ಹಾಸಿಗೆಯಲ್ಲಿ ಒಬ್ಬಳೇ ಮಲಗಲು ಅವಳಿಗೆ ಭಯವಾಗಿ ತಾನು ಏಕಾಂಗಿಯಾದಂತೆನ್ನಿಸಿತು.



ಮಿಮಿ ಊಟದ ಮೇಜಿನ ಬಳಿ ಬಂದಾಗ, "ಶುಭ ಮುಂಜಾನೆ, ಮಿಮಿ", ಎಂದು ಅಪ್ಪ ಜಿರಾಫೆ ಹೇಳಿದರು.
"ನಮ್ಮೊಂದಿಗೆ ತಿಂಡಿ ತಿನ್ನು..ಇಲ್ಲಿ ಸ್ವಲ್ಪ ಟೋಸ್ಟ್ ಮತ್ತು ಮೊಟ್ಟೆಗಳಿವೆ.", ಎಂದು ಅಮ್ಮ ಜಿರಾಫೆ ಒಂದು ಪ್ಲೇಟನ್ನು ಅವಳ ಎದುರಿಗೆ ಇಟ್ಟಳು.
"ನಾನು ಬ್ರೆಡ್ ತಿನ್ನುವುದಿಲ್ಲ...ಹಳೆಯ ಮನೆಯಲ್ಲಿ, ಮಿಸೆಸ್ ಜಿಂಕೆ/ಡೀರ್ ಗಂಜಿ ಮಾಡುತ್ತಿದ್ದಳು" ಪ್ಲೇಟನ್ನು ದೂರ ತಳ್ಳುತ್ತಾ ಮಿಮಿ ಹೇಳಿದಳು.




ಜಿರಾಫೆ ಚಪಾತಿ ಮಾಡಿದ್ದರಿಂದ ಮಧ್ಯಾಹ್ನದ ಊಟದ ಸಮಯದಲ್ಲಿ ಕೂಡಾ, ಮಿಮಿ ಯಾವುದೇ ಆಹಾರ ತೆಗೆದುಕೊಳ್ಳಲು ನಿರಾಕರಿಸಿದಳು.
"ಮಿಸೆಸ್ ಡೀರ್ ಅನ್ನ ಮತ್ತು ಬೇಳೆ ಸಾರು ಮಾಡುತ್ತಿದ್ದಳು", ಎಂದು ಮಿಮಿ ಹೇಳಿದಳು. "ನಾನು ಮಧ್ಯಾಹ್ನದ ಊಟಕ್ಕೆ ಅದನ್ನೇ ತಿನ್ನುವುದು...ಚಪಾತಿಯಲ್ಲ..ನನಗೆ ಅದು ಇಷ್ಟವಿಲ್ಲ."
ಅವರು ಚಮಚ ಮತ್ತು ಫೋರ್ಕ್ ಬಳಸುತ್ತಾರೆಂದು ಅವಳು ಗಮನಿಸಿದಳು. ಅವಳಿಗೆ ಅದನ್ನು ಬಳಸುವುದು ಗೊತ್ತಿಲ್ಲ..ಅವಳಿಗೆ ಕೈಯಲ್ಲೇ ತಿಂದು ಗೊತ್ತಿತ್ತು.



ಮಿಮಿಗೆ ದೊಡ್ಡ ಯೋಚನೆಯಾಗಿದ್ದು ಟಾಯ್ಲೆಟ್ ಬಳಸುವಾಗ.
ಮಿಸೆಸ್ ಬೇರ್ಳ ಮನೆಯಲ್ಲಿ ಸ್ನಾನದ ಮನೆಗಳು ಪೂರ್ಣ ಬೇರೆ ತರದಲ್ಲಿದ್ದವು!ಅಲ್ಲಿ ಬಕೆಟ್ ಹಾಗೂ ಮಗ್ಗುಗಳನ್ನು ಸ್ನಾನಕ್ಕಾಗಿ ಬಳಸಲಾಗುತ್ತಿತ್ತು.
ಆದರೆ ಜಿರಾಫೆಯ ಮನೆಯಲ್ಲಿ, ಅಲ್ಲಿ ಎತ್ತರದಲ್ಲಿ ಗೋಡೆಯ ಮೇಲೆ ವಿಚಿತ್ರವಾಗಿ ಕಾಣುತ್ತಿದ್ದ ಒಂದು ಟ್ಯಾಪ್ ಇದ್ದಿತು ಅದರಿಂದ ನುಗ್ಗುತ್ತಿದ್ದ ನೀರಿನಡಿಯಲ್ಲಿ ಒಬ್ಬರು ಸ್ನಾನಕ್ಕಾಗಿ ನಿಲ್ಲಬೇಕಿತ್ತು.
ಅವರು ಅದನ್ನು 'ಶವರ್' ಎಂದು ಕರೆಯುತ್ತಿದ್ದರು, ಅದರಿಂದ ನೀರು ನುಗ್ಗಿದಾಗ ಮಿಮಿಗೆ ಬಹಳ ಭಯವಾಯಿತು.
ಮತ್ತು ಮಿಸೆಸ್ ಬೇರ್ಳ ಬಾತ್ರೂಮ್ನ ನೆಲದಲ್ಲಿ ಒಂದು ಗುಂಡಿಯಂತಹದ್ದು ಇದ್ದಿತು, ಅದರಲ್ಲಿ ಮಲಮೂತ್ರ ಮಾಡಬಹುದಿತ್ತು-ಆದರೆ ಜಿರಾಫೆಯ ಮನೆಯಲ್ಲಿ ಒಂದು ವಿಚಿತ್ರ ಕುರ್ಚಿಯಂತಹದ್ದು ಇದ್ದು ಅದರಲ್ಲಿ ಒಂದು ರಂಧ್ರವಿತ್ತು. ಮಿಮಿಗೆ ಅದರ ಮೇಲೆ ಕುಳಿತು ಪೀ ಮಾಡುವುದು ಬಹಳ ವಿಚಿತ್ರವೆನಿಸಿತು.




ಇದೆಲ್ಲವೂ ಮಿಮಿಗೆ ಬಹಳ ವಿಚಿತ್ರ ಹಾಗೂ ಗೊಂದಲಮಯವಾಗಿತ್ತು....ಅವಳ ಹಾಸಿಗೆ, ಆಹಾರ, ತನಗೆ ರೂಢಿಯಾಗಿದ್ದ ಹಾಗೂ ಹಿತಕರವಾಗಿದ್ದ ಟಾಯ್ಲೆಟ್ಗಿಂತ ಸಂಪೂರ್ಣ ಬೇರೆಯಿರುವ ಟಾಯ್ಲೆಟ್.ಮತ್ತು ಜಿರಾಫೆಯ ಮನೆ ತುಂಬಾ ದೊಡ್ಡದಾಗಿತ್ತು...ಪಾಪ, ಮಿಮಿ ಅದರ ಇತರ ಕೋಣೆಗಳನ್ನು ಹುಡುಕುವಾಗ ಅದರಲ್ಲಿ ದಾರಿ ತಪ್ಪುತ್ತಿದ್ದಳು!
ಎಲ್ಲಕ್ಕಿಂತ ಹೆಚ್ಚು ಗೊಂದಲಮಯವಾಗಿದ್ದದ್ದು ಜಿರಾಫೆಗಳನ್ನು 'ಮಮ್ಮಿ' ಮತ್ತು 'ಡ್ಯಾಡಿ' ಎಂದು ಕರೆಯುವುದು.
ನನಗೆ ಎಗಾಗಲೇ ಮಮ್ಮಿ ಮತ್ತು ಡ್ಯಾಡಿ ಇದ್ದಾರೆ....ಅಥವಾ ನನಗೆ ಮಮ್ಮಿ ಮತ್ತು ಡ್ಯಾಡಿ ಇದ್ದರು.ಇವರನ್ನು ಅದೇ ಹೆಸರಿನಿಂದ ಹೇಗೆ ಕರೆಯಲಿ?ಅವಳಿಗೆ ಇದು ವಿಚಿತ್ರವೆನಿಸಿತು.





ಹಾಗಾಗಿ, ಸಂಜೆಯ ಹೊತ್ತಿನಲ್ಲಿ, ಮಿಮಿ ಅಳಲು ಪ್ರಾರಂಭಿಸಿದಳು.
ಜಿರಾಫೆಗಳು ಅವಳು ಗಟ್ಟಿಯಾಗಿ ಅಳುವುದನ್ನು ಕಂಡವು.
"ಏನಾಯಿತು ಮಿಮಿ?"ಅವುಗಳು ಗಾಬರಿಯಿಂದ ಕೇಳಿದವು.




"ನಾವು ನಿನಗೆ ತಂದ ಹೊಸ ಅಂಗಿ ಇಲ್ಲಿದೆ," ಎಂದು ಮಿಸೆಸ್ ಜಿರಾಫೆ ಹೇಳಿದಳು.
"ನೀನು ನಿನ್ನ ಹೊಸ ಆಟದ ಕೊಠಡಿಯಲ್ಲಿ ಸ್ವಲ್ಪ ಸಮಯ ಕಳೆದರೆ ನಿನಗೆ ಹಿತವೆನಿಸಬಹುದು...ನಿನ್ನಲ್ಲಿರುವ ಎಲ್ಲಾ ಹೊಸ ಸುಂದರ ಆಟಿಕೆಗಳನ್ನು ನೀನು ಇಷ್ಟಪಡುವುದಿಲ್ಲವೇ?"ಎಂದು ಮಿಸ್ಟರ್ ಜಿರಾಫೆ ಕೇಳಿದನು.





ಆದರೆ ಮಿಮಿ ಹೊಸ ಅಂಗಿಯನ್ನು ನೆಲಕ್ಕೆ ಎಸೆದಳು, "ನನಗೆ ಇಲ್ಲಿರಲು ಸ್ವಲ್ಪವೂ ಇಷ್ಟವಿಲ್ಲ...ನನಗೆ ಇದು ಇಷ್ಟವಿಲ್ಲ", ಕಣ್ಣೀರಿಡುತ್ತಾ ಮಿಮಿ ಹೇಳಿದಳು.
"ಆದರೆ ಇದು ನಿನ್ನ ಮನೆ...ಮತ್ತು ನಾವು ನಿನ್ನ ಅಪ್ಪ ಅಮ್ಮ," ಎಂದು ಜಿರಾಫೆಗಳು ಹೇಳಿದವು.
"ಇಲ್ಲ, ಇದು ನನ್ನ ಮನೆಯಲ್ಲ...ನಾನು ಮಿಸೆಸ್ ಬೇರ್ಳ ಮನೆಗೆ ಹಾಗೂ ಅಲ್ಲಿರುವ ನನ್ನ ಎಲ್ಲ ಸ್ನೇಹಿತರ ಬಳಿಗೆ ವಾಪಾಸು ಹೋಗಬೇಕು! ಮತ್ತು ನನಗೆ ನಿಮ್ಮನ್ನು 'ಅಮ್ಮ' 'ಅಪ್ಪ' ಎಂದು ಕರೆಯಲ್ಲು ಇಷ್ಟವಿಲ್ಲ..ಏಕೆಂದರೆ ನೀವು ನನ್ನ ತಂದೆ ತಾಯಿಯರಲ್ಲ!" ಎಂದು ಮಿಮಿ ಅತ್ತಳು.




"ನೀನು ಯಾಕೆ ದುಃಖಿಯಾಗಿದ್ದೀಯೆಂದು ನನಗೆ ಈಗ ಅರ್ಥವಾಯಿತು," ಎಂದು ಮಿಸ್ಟರ್ ಜಿರಾಫೆ ಹೇಳಿದನು. "ನಿನಗೆ ಗೊತ್ತಾ, ಮಿಮಿ, ಹೊಸ ಸ್ಥಳಕ್ಕೆ ಹೋಗಿ ಅಲ್ಲಿ ಜೀವನವನ್ನು ಹೊಸದಾಗಿ ಪ್ರಾರಂಭಿಸುವುದು ಯಾರಿಗೇ ಆದರೂ ಬಹಳ ಕಷ್ಟ....ಏಕೆಂದರೆ ಅಲ್ಲಿ ಎಲ್ಲವೂ ಹೊಸತು..ಮತ್ತು ನೀನು ಮಿಸೆಸ್ ಬೇರ್ ಹಾಗೂ ನಿನ್ನ ಹಳೆಯ ಮನೆಯ ಎಲ್ಲಾ ಸ್ನೇಹಿತರನ್ನು ಜ್ಞಾಪಿಸಿಕೊಳ್ಳುತ್ತಿದ್ದೀ...ನೀನು ಅವರನ್ನು ತುಂಬಾ ಪ್ರೀತಿಸುತ್ತೀ ಎಂದು ನನಗೆ ತಿಳಿದಿದೆ."

"ನಿನಗೆ ಮೊದಲು 'ಮಮ್ಮಿ' ಮತ್ತು 'ಡ್ಯಾಡಿ' ಇದ್ದರು ಎಂಬುದು ನನಗೆ ತಿಳಿದಿದೆ" ಎಂದು ಮಿಸ್ಟರ್ ಜಿರಾಫೆ ಹೇಳಿದ. "ನಿನಗೆ ಈಗ ನಮ್ಮನ್ನು ಆ ರೀತಿ ಕರೆಯಬೇಕೆಂದು ಇಷ್ಟವಿಲ್ಲದಿದ್ದರೆ ಪರವಾಗಿಲ್ಲ. ಸಮಯ ಕಳೆದಂತೆ, ನೀನು ಮಿಸೆಸ್ ಬೇರ್ ಮನೆಯಲ್ಲಿ ಹೊಂದಿಕೊಂಡಂತೆ, ನಮ್ಮೊಂದಿಗೆ ಹೊಂದಿಕೊಂಡು ಸಂತೋಷವಾಗಿರುತ್ತೀ ಎಂದು ನನಗನ್ನಿಸುತ್ತಿದೆ....ಹಾಗೂ ಬಹುಷಃ ನೀನು ಇಲ್ಲಿ ಇರಲು ಇಷ್ಟಪಟ್ಟ ನಂತರ ನೀನು ನಮ್ಮನ್ನು ಅಪ್ಪ ಮತ್ತು ಅಮ್ಮ ಎಂದು ಕರೆಯಬಹುದು."

"ನಾವು ಈಗಲೂ ನಿನ್ನನ್ನು ಪ್ರೀತಿಸುತ್ತೇವೆ ಹಾಗೂ ನೀನು ನಮಗೆ ಬೇಕು....ನೀನು ನಮ್ಮ ಮಗು ಎಂದು ನಾವು ನಂಬುತ್ತೇವೆ."ಎಂದು ಜಿರಾಫೆಗಳು ಮಿಮಿಗೆ ಹೇಳಿದವು.




ನಂತರ, ಜಿರಾಫೆಗಳು ನಿಧಾನವಾಗಿ ಮಿಮಿಗೆ ಹೊಂದಿಕೊಳ್ಳಲು ಸಹಾಯ ಮಾಡಿದವು....ಅವರು ಅವಳಿಗೆ ಮಧ್ಯಾಹ್ನದ ಊಟಕ್ಕೆ ಬೇಳೆ ಸಾರು ಮತ್ತು ಅನ್ನವನ್ನು ಮಾಡಿದವು ಹಾಗೂ ಅವಳ ಕೈಯಿಂದ ಊಟ ಮಾಡುವುದು ಪರವಾಗಿಲ್ಲ ಎಂದು ಹೇಳಿದವು....ಅವಳು ನಿಧಾನವಾಗಿ ಚಮಚದ ಬಳಕೆಯನ್ನು ಕಲಿತಳು.



ಮಿಸೆಸ್ ಜಿರಾಫೆ ಅವಳಿಗೆ ಹೊಸ ಟಾಯ್ಲೆಟ್ ಹಾಗೂ ಶವರ್ ಹೇಗೆ ಕೆಲಸಮಾಡುತ್ತದೆಂದು ತೋರಿಸುತ್ತಾ ಅದನ್ನು ಬಳಸುವುದು ಹೇಗೆ ಎಂದು ಕಲಿಯಲು ಸಹಾಯ ಮಾಡಿದಳು.
ಈಗ ಅವಳು ಶವರ್ ಅನ್ನು ಇಷ್ಟಪಡುತ್ತಿದ್ದಳು ಏಕೆಂದರೆ ಅದರ ಅಡಿಯಲ್ಲಿ ನಿಂತು ಮಳೆಯಲ್ಲಿ ನಿಂತಂತೆ ಭಾವಿಸಿಕೊಳ್ಳಬಹುದು ಎಂದು!



ಜಿರಾಫೆಗಳ ಕೋಣೆಯಲ್ಲಿ ಚಿಕ್ಕ ಹಾಸಿಗೆಯಲ್ಲಿ ಮಿಮಿ ಮಲಗಿಕೊಂಡಳು, ಈಗ ಅವಳಿಗೆ ರಾತ್ರಿಯಲ್ಲಿ ಒಂಟಿ ಮತ್ತು ಭಯವೆನಿಸಲಿಲ್ಲ.
ಕೆಲವೊಮ್ಮೆ ಮಿಸೆಸ್. ಬೇರ್ಳ ಮನೆಗೆ ಹೋಗಿ ಮಿಮಿಯ ಹಳೆಯ ಸ್ನೇಹಿತರನ್ನು ಭೇಟಿ ಮಾಡಬಹುದೆಂದೂ ಜಿರಾಫೆಗಳು ಹೇಳಿದವು.
ಹೀಗಾಗಿ, ನಿಧಾನವಾಗಿ ಮಿಮಿ ತನ್ನ ಹೊಸ ಮನೆ ಹಾಗೂ ಕುಟುಂಬಕ್ಕೆ ಮಿಮಿ ಹೊಂದಿಕೊಂಡಳು.



"ಅಮ್ಮ, ಅಪ್ಪ ನಾನು ಶಾಲೆಗೆ ಹೋಗಬೇಕಲ್ಲವೇ?", ಎಂದು ಒಂದು ದಿನ ಮಿಮಿ ಕೇಳಿದಳು.
ಮಿಮಿಯ ಸಂತೋಷವನ್ನು ಕಂಡು ನಗುತ್ತಾ ಜಿರಾಫೆಗಳು, "ಹೌದು, ನೀನು ಹೋಗಲೇಬೇಕು," ಎಂದು ಹೇಳಿದವು. "ಈ ಬೇಸಿಗೆ ರಜೆ ಕಳೆದ ನಂತರ, ಎಲ್ಲಾ ಮಕ್ಕಳೂ ಹೋಗುವ ಕಾಡಿನ ಶಾಲೆಗೆ ನೀನು ಹೋಗುತ್ತೀಯಾ."

ಸಮುದಾಯ ಮಕ್ಕಳ ಮತ್ತು ಹದಿಹರೆಯದವರ ಮಾನಸಿಕ ಆರೋಗ್ಯ ಸೇವೆಗಳ
ಯೋಜನೆ,
ಮಕ್ಕಳ ಮತ್ತು ಹದಿಹರೆಯದವರ ಮನೋವೈದ್ಯಶಾಸ್ತ್ರ ಇಲಾಖೆ,
ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನಗಳ ರಾಷ್ಟ್ರೀಯ ಸಂಸ್ಥೆ (ನಿಮ್ಹಾನ್ಸ್)
(ರಾಷ್ಟ್ರೀಯ ಪ್ರಾಮುಖ್ಯತೆಯ ಸಂಸ್ಥೆ)
ಹೊಸೂರು ರಸ್ತೆ, ಬೆಂಗಳೂರು-560029
**Website:www.nimhans.ac.in**
**Email :capnimhans@gmail.com**

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರದ ನೆರವಿನೊಂದಿಗೆ

ವಿನ್ಯಾಸ ಮತ್ತು ಕಲೆ: ಸತೀಶ್ ರಾಮ್